**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು–560 018. ದೂರವಾಣಿ: 080–26701303


## ೨೦.೦೧.೨೦೧೨ರಂದು ನಡೆದ ಪ್ರಶಾಸನ ಸಮಿತಿಯ ೨ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿಯ ೨ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜನವರಿ ೨೦, ೨೦೧೨ರ ಶುಕ್ರವಾರದಂದು ಮಧ್ಯಾಹ್ನ ೦೨.೩೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೩. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೪. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೫. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೬. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೭. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |
| ೮. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |
| ೯. | **ಶ್ರೀ ಡಿ. ಸುರೇಂದ್ರಕುಮಾರ್,** ಬೆಂಗಳೂರು | ಸದಸ್ಯರು |
| ೧೦. | **ಡಾ. ಶ್ರೀನಿವಾಸ ವರಖೇಡಿ,** ಕುಲಸಚಿವರು (ಪ್ರ) | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಪ್ರಧಾನ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಸರ್ಕಾರದ ಕಾರ್ಯದರ್ಶಿಗಳು,** ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು | ಸದಸ್ಯರು |
| ೪. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು |
| ೫. | **ಉಪ ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಬೆಂಗಳೂರು | ಸದಸ್ಯರು |
| ೬. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ವಿಷಯಗಳು ಮಂಡಿತವಾದವು.

### ವಿಷಯ 1: ಪ್ರಶಾಸನ ಸಮಿತಿ ಮೊದಲನೇ ಸಭೆಯ ಅನುಪಾಲನಾ ವರದಿ.

ನಿರ್ಣಯ: **ಸಭೆಯು ಪ್ರಶಾಸನ ಸಮಿತಿಯ ಮೊದಲ ಸಭೆಯ ನಿರ್ಣಯಗಳು ಅನುಪಾಲನೆ ಆಗಿರುವುದರ ಬಗೆಗೆ ವಿವರಗಳನ್ನು ಪರಿಶೀಲಿಸಿ ಅನುಮೋದನೆಯನ್ನು ನೀಡಿತು.**

### ವಿಷಯ 2: ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಬಗೆಗೆ.

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಪ್ರಸ್ತುತ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳು ಸೇರಿದಂತೆ ಒಟ್ಟಾರೆ 21 ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಈ ಕಾಲೇಜುಗಳಲ್ಲಿ ವಿದ್ವನ್ಮಧ್ಯಮಾ (ಬಿ.ಎ.) ಮತ್ತು ವಿದ್ವದುತ್ತಮಾ (ಎಂ.ಎ.) ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಪಾವತಿಸಬೇಕಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಇಡಿ 113 ಯುಡಿವಿ 2011, ಬೆಂಗಳೂರು, ದಿನಾಂಕ: 02.11.2011ರಲ್ಲಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಹಾಗೂ ಪ್ರೋತ್ಸಾಹಧನವಾಗಿ ಮೊದಲನೇ ಕಂತಿನಲ್ಲಿ ರೂ. 3,00,950/– (ಯೋಜನೇತರ) ಮತ್ತು ರೂ. 5,00,000/– (ಯೋಜನೆ) ಒಟ್ಟು **ರೂ. 8,00,950/–** (ಎಂಟು ಲಕ್ಷದ ಒಂಭೈನೂರ ಐವತ್ತು ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆ ಮಾಡಿದೆ. ಈ ಮೊತ್ತದಲ್ಲಿ ರಾಜ್ಯಮಟ್ಟದ ಸಂಸ್ಕೃತ ಸ್ಪರ್ಧೆಗಳನ್ನು ನಡೆಸಲು ರೂ. 5,26,188/–ಗಳು ಮತ್ತು ವಲಯವಾರು ಪಾಠಶಾಲೆಗಳ ಸಂಸ್ಕೃತ ಸ್ಪರ್ಧೆಗಳನ್ನು ನಡೆಸಲು ರೂ. 3,94,000/–ಗಳು ಒಟ್ಟು **ರೂ. 9,20,188**/–ಗಳನ್ನು ಖರ್ಚು ಮಾಡಲಾಗಿದೆ. ಹೆಚ್ಚುವರಿ ಮೊತ್ತವನ್ನು ವಿಶ್ವವಿದ್ಯಾಲಯದ ಅನುದಾನದಿಂದ ಖರ್ಚು ಮಾಡಲಾಗಿದೆ. ಸರ್ಕಾರದಿಂದ ಎರಡನೇ ಕಂತಿನ ಅನುದಾನ ಬಿಡುಗಡೆಯಾದ ನಂತರ ಹೆಚ್ಚುವರಿ ಖರ್ಚಾದ ರೂ. 1,19,238/–ಗಳು ಹೊರತುಪಡಿಸಿ **ರೂ. 6,81,712/–ಗಳು** ವಿದ್ಯಾರ್ಥಿವೇತನಕ್ಕಾಗಿ ಉಳಿಯಲಿದೆ. ವಿದ್ಯಾರ್ಥಿ ವೇತನಕ್ಕೆ ಸಂಬಂಧಿಸಿದ ವಿವರಗಳ ಈ ಕೆಳಗಿನಂತಿವೆ.

| ತರಗತಿ | ವಿದ್ಯಾರ್ಥಿಗಳ ಸಂಖ್ಯೆ | ವಿದ್ಯಾರ್ಥಿವೇತನ |
|---|---|---|
| ವಿದ್ವನ್ಮಧ್ಯಮಾ ಪ್ರಥಮ ವರ್ಷ | 425 x 1000 | ರೂ. 4,25,000/– |
| ವಿದ್ವನ್ಮಧ್ಯಮಾ ದ್ವಿತೀಯ ವರ್ಷ | 276 x 2000 | ರೂ. 5,52,000/– |
| ವಿದ್ವನ್ಮಧ್ಯಮಾ ತೃತೀಯ ವರ್ಷ | 323 x 3000 | ರೂ. 9,69,000/– |
| ವಿದ್ವದುತ್ತಮಾ ಪ್ರಥಮ ವರ್ಷ | 172 x 4000 | ರೂ. 6,88,000/– |
| ವಿದ್ವದುತ್ತಮಾ ದ್ವಿತೀಯ ವರ್ಷ | 216 x 5000 | ರೂ. 10,80,000/– |
| **ಒಟ್ಟು** | | **ರೂ. 37,14,000/–** |

ವಿದ್ಯಾರ್ಥಿವೇತನ ಪಾವತಿಸಲು ರೂ. 6,81,712/– ಉಳಿದಿದ್ದು, ರೂ. 30,32,288/– ಕೊರತೆಯಾಗಲಿದೆ. ಈ ಮೊತ್ತವನ್ನು ಸರ್ಕಾರದಿಂದ ಪಡೆಯಬೇಕಾಗಿದೆ.

ನಿರ್ಣಯ: **ಸಭೆಯು ಎಲ್ಲ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿತು. ಮಾನ್ಯ ಕುಲಪತಿಗಳು ಕೊರತೆಯಾಗುವ ಹಣವನ್ನು ಸರ್ಕಾರದಿಂದ ನಿರೀಕ್ಷಿಸುವುದು, ಒಂದು ಪಕ್ಷ ನಿಗದಿತ ಅವಧಿಯೊಳಗೆ ಬರದೇ ಹೋದಲ್ಲಿ 2011–12ನೇ ಸಾಲಿನಲ್ಲಿ ಉಳಿಯುವ ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನದಿಂದ ಈ ವಿದ್ಯಾರ್ಥಿವೇತನವನ್ನು ಪಾವತಿಸಬಹುದೆಂದು ಸಭೆಗೆ ಸೂಚಿಸಿದರು. ಈ ಅಂಶಕ್ಕೆ ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

## ವಿಷಯ 3: ಅನುದಾನಿತ ಸಂಸ್ಕೃತ ಪಾಠಶಾಲೆಗಳ ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವ ಬಗೆಗೆ.

ಟಿಪ್ಪಣಿ: ರಾಜ್ಯದಲ್ಲಿನ ಸುಮಾರು 350ಕ್ಕೂ ಹೆಚ್ಚು ಸಂಸ್ಕೃತ ಪಾಠಶಾಲೆಗಳ ಪೈಕಿ 234 ಪಾಠಶಾಲೆಗಳನ್ನು ಅನುದಾನಕ್ಕೊಳಪಡಿಸಲಾಗಿದ್ದು, ಇತರ ಪಾಠಶಾಲೆಗಳನ್ನು ಅನುದಾನಕ್ಕೊಳಪಡಿಸುವಲ್ಲಿ ಕ್ರಮವಿಡಲಾಗಿದೆ. ಈ ಪಾಠಶಾಲೆಗಳಲ್ಲಿ ಪ್ರಥಮಾ, ಕಾವ್ಯ ಮತ್ತು ಸಾಹಿತ್ಯ ತರಗತಿಗಳಲ್ಲಿ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ 2011–12ನೇ ಸಾಲಿನ ವಿದ್ಯಾರ್ಥಿವೇತನವನ್ನು ನೀಡಬೇಕಿದೆ. ಒಟ್ಟು ಎಸ್.ಸಿ./ಎಸ್.ಟಿ. ವಿದ್ಯಾರ್ಥಿಗಳ ವಿವರ ಮತ್ತು ವಿದ್ಯಾರ್ಥಿವೇತನದ ಮೊತ್ತದ ವಿವರಗಳು ಈ ಕೆಳಗಿನಂತಿವೆ:

| | |
|---|---|
| ಪರಿಶಿಷ್ಟ ಜಾತಿಯ ಒಟ್ಟು ವಿದ್ಯಾರ್ಥಿಗಳು | 5339 |
| ಪರಿಶಿಷ್ಟ ಪಂಗಡದ ಒಟ್ಟು ವಿದ್ಯಾರ್ಥಿಗಳು | 2662 |
| **ಒಟ್ಟು ವಿದ್ಯಾರ್ಥಿಗಳ ಸಂಖ್ಯೆ** | **8001** |

ಈ ಮೊತ್ತವನ್ನು ಭರಿಸುವ ಸಂಬಂಧವಾಗಿ ಈಗಾಗಲೇ ಸರ್ಕಾರಕ್ಕೆ ಬರೆದಿರುವ ಪತ್ರದ ಅನುಸಾರ ರೂ. 50 ಲಕ್ಷಗಳನ್ನು ಕೋರಲಾಗಿದ್ದು, ಅದು ಪರಿಚಲನೆಯಲ್ಲಿದೆ. ಅಂತಿಮ ವರ್ಷದ ವಿದ್ಯಾರ್ಥಿಗಳ ಸಂಖ್ಯೆಯನ್ನು ಹಾಗೂ ಕೊಡಬಹುದಾದ ತಲಾ ಮೊತ್ತವನ್ನು ನಿರ್ಧರಿಸಬೇಕಾಗಿದೆ.

ನಿರ್ಣಯ: **ಸರ್ಕಾರದಿಂದ 50 ಲಕ್ಷ ರೂ.ಗಳು ಬಂದ ನಂತರ ಈ ಸಂಬಂಧವಾಗಿ ಕ್ರಮಕೈಗೊಳ್ಳಬಹುದೆಂದು ಹಾಗೂ ಉಪಸಮಿತಿಯೊಂದನ್ನು ರಚಿಸಿ, ಅದರ ಅಡಿಯಲ್ಲಿ ಸಮಗ್ರವಾಗಿ ಪರಿಶೀಲಿಸಿ ವಿದ್ಯಾರ್ಥಿವೇತನ ನೀಡಲು ಸಭೆಯು ಒಪ್ಪಿತು. ಈ ಸಂಬಂಧವಾಗಿ ಸರ್ಕಾರಕ್ಕೆ ಮತ್ತೊಮ್ಮೆ ಪತ್ರ ಬರೆದು ಕ್ರಮವಹಿಸಬೇಕೆಂದು ಸಭೆಯು ನಿರ್ಣಯಿಸಿತು.**

## ವಿಷಯ 4: ಕುಲಪತಿಗಳ ಗೃಹಕಛೇರಿ ವೆಚ್ಚ

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬಂದ ನಂತರದಲ್ಲಿ ವಿಶ್ವವಿದ್ಯಾಲಯದಲ್ಲಿ ಪೂರ್ಣಕಾಲಿಕ ನಿಯುಕ್ತ ಸಿಬ್ಬಂದಿ ವರ್ಗವು ಇಲ್ಲದ ಕಾರಣ ವೈಯಕ್ತಿಕವಾಗಿ ಕಛೇರಿ ಹಾಗೂ ಗೃಹಕಛೇರಿಯಲ್ಲಿ ಹೆಚ್ಚಿನ ಕೆಲಸ–ಕಾರ್ಯಗಳನ್ನು ನಡೆಸುತ್ತಿದ್ದು, ವಿಶ್ವವಿದ್ಯಾಲಯದ ಶೈಶವಾವಸ್ಥೆಯಲ್ಲಿ ಸರ್ಕಾರ, ಸಂಸ್ಕೃತ ಕ್ಷೇತ್ರದ ಗಣ್ಯರು, ವಿದ್ವಜ್ಜನರೊಂದಿಗೆ ಕುಲಪತಿಗಳು ವೈಯಕ್ತಿಕ ಹಾಗೂ ಸಾಂಸ್ಥಿಕವಾದ ಆಡಳಿತಾತ್ಮಕ ದೃಷ್ಟಿಯಿಂದ ಕಾರ್ಯನಿರ್ವಹಿಸಬೇಕಾಗಿದ್ದು, ಇವರ ಗೃಹಕಛೇರಿಯ ನಿರ್ವಹಣಾ ವೆಚ್ಚ, ದೂರವಾಣಿ ವೆಚ್ಚ, ಇತ್ಯಾದಿಗಳು ಇಂದಿನ ದಿನಮಾನಕ್ಕನುಗುಣವಾಗಿ ಹೆಚ್ಚಾಗಿರುವ ಕಾರಣ, ಇತರ ವಿಶ್ವವಿದ್ಯಾಲಯಗಳಲ್ಲಿ ಇರುವಂತೆ ಗೃಹಕಛೇರಿಯ ಔಪಚಾರಿಕ ವೆಚ್ಚವನ್ನು **ರೂ. 10000**/–ಗಳಿಗೆ ನಿಗದಿಗೊಳಿಸಬಹುದಾಗಿದೆ ಹಾಗೂ ಈ ವೆಚ್ಚವನ್ನು 2010ರ ಜೂನ್ ತಿಂಗಳಿನಿಂದ ಅನ್ವಯವಾಗುವಂತೆ ನೀಡಬಹುದಾಗಿದ್ದು, ಈ ಸಂಬಂಧವಾಗಿ ಖರ್ಚು–ವೆಚ್ಚಗಳ ಒಂದು ರಸೀದಿಯನ್ನು ಕುಲಪತಿಗಳ ಆಪ್ತಶಾಖೆಯಿಂದ ಪಡೆಯಬಹುದು.

ನಿರ್ಣಯ: **ಸಭೆಯು ಇತರ ವಿಶ್ವವಿದ್ಯಾಲಯಗಳ ಕುಲಪತಿಗಳ ಗೃಹಕಛೇರಿ ವೆಚ್ಚದ ವಿವರಗಳನ್ನು ಪರಿಶೀಲಿಸಿ, ತಿಂಗಳಿಗೆ ರೂ. 10,000/– ಮೊತ್ತ ಪಾವತಿಸಬಹುದೆಂದು, 2010ರ ಜೂನ್ ತಿಂಗಳಿನಿಂದ ಅನ್ವಯವಾಗುವಂತೆ ನೀಡಬಹುದೆಂದು, ಈ ಸಂಬಂಧ ರಸೀದಿಯೊಂದನ್ನು ಕುಲಪತಿಗಳ ಆಪ್ತಶಾಖೆಯಿಂದ ಪಡೆಯಬಹುದೆಂದು ಸಭೆ ನಿರ್ಣಯಿಸಿತು.**

## ವಿಷಯ 5: ವಾಹನ ಚಾಲಕರಿಗೆ ಸಮವಸ್ತ್ರಭತ್ಯೆ ನೀಡುವ ಬಗೆಗೆ.

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕುಲಪತಿ ಹಾಗೂ ಕುಲಸಚಿವರ ವಾಹನಗಳಿಗೆ ವಾಹನ ಚಾಲಕರಿದ್ದಾರೆ. ಇವರಿಗೆ ಎರಡು ಜೊತೆ ಸಮವಸ್ತ್ರವನ್ನು ನೀಡಿ, ಕರ್ನಾಟಕ ಸರ್ಕಾರದ ನಿಯಮಾವಳಿಗಳಂತೆ ಇತ್ತೀಚೆಗೆ ಸರ್ಕಾರಿ ವಾಹನಗಳ ಚಾಲಕರಿಗೆ ಮಾಹೆಯಾನ ರೂ. 200 ರಿಂದ ರೂ. 250ಕ್ಕೆ ಸಮವಸ್ತ್ರಭತ್ಯೆಯನ್ನು ಹೆಚ್ಚಿಸಿದ್ದು, ಅದರಂತೆ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಾಹನ ಚಾಲಕರಿಗೆ ಸಮವಸ್ತ್ರಭತ್ಯೆಯನ್ನು ನೀಡಲು ಅನುಮೋದನೆಗಾಗಿ ಮಂಡಿಸಿದೆ. ಜೊತೆಯಲ್ಲಿರುವ ಆದೇಶದಲ್ಲಿ 'ಡಿ' ದರ್ಜೆ ನೌಕರರಿಗೂ ಕೂಡ ಸಮವಸ್ತ್ರಭತ್ಯೆ ನೀಡುವುದಾದಲ್ಲಿ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 12 ಎಸ್‌ಆರ್‌ಪಿ 2010, ಬೆಂಗಳೂರು, ದಿನಾಂಕ: 18.05.2010 ಜೊತೆಗಿರಿಸಿದೆ.

ನಿರ್ಣಯ: **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯ ಕುಲಪತಿ ಹಾಗೂ ಕುಲಸಚಿವರ ವಾಹನ ಚಾಲಕರಿಗೆ ಎರಡು ಜೊತೆ ಬಿಳಿ ಸಮವಸ್ತ್ರಗಳನ್ನು ಕೊಳ್ಳುವುದು ಹಾಗೂ ಶುಚಿ ಮುಂತಾದ ವ್ಯವಸ್ಥೆಗೆ ಪ್ರತಿ ತಿಂಗಳು ರೂ. 250/–ಗಳನ್ನು ಪಾವತಿಸಬಹುದೆಂದು ಸಭೆಯು ತೀರ್ಮಾನಿಸಿತು. ಈ ತೀರ್ಮಾನವನ್ನು 2012ರ ಫೆಬ್ರವರಿ ಮಾಸದಿಂದ ಜಾರಿಗೆ ತರಲು ಸೂಚಿಸಿತು.**

**ವಿಷಯ 6: ಮೇಲುಕೋಟೆ ಸಂಸ್ಕೃತ ಕಾಲೇಜನ್ನು ಘಟಕ ಕಾಲೇಜನ್ನಾಗಿ ತೆಗೆದುಕೊಳ್ಳಬೇಕೆಂಬ ಪ್ರಸ್ತಾವ, ವರದಿ ಪರಿಶೀಲನೆ.**

ಟಿಪ್ಪಣಿ: ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಕಾರ್ಯಾಲಯದ ಪತ್ರ ಸಂಖ್ಯೆ: ಇಡಿ 71 ಯುಡಿವಿ 2011, ದಿನಾಂಕ: 10.11.2011ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ಪತ್ರವನ್ನು ಬರೆದು, ಮೇಲುಕೋಟೆಯ ಸರ್ಕಾರಿ ಸಂಸ್ಕೃತ ಕಾಲೇಜನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಡಿಸುವ ಕುರಿತು ಆ ಕಾಲೇಜಿಗೆ ಸೇರಿರುವ ಭೂಮಿ, ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಬೋಧಕ–ಬೋಧಕೇತರ ವರ್ಗದ ಪಟ್ಟಿ, ವೇತನಶ್ರೇಣಿ ಇತ್ಯಾದಿಗಳ ಬಗ್ಗೆ ಸ್ಥಳಪರಿಶೀಲನೆ ನಡೆಸಿ ವಿವರವಾದ ವರದಿಯನ್ನು ಸಲ್ಲಿಸುವಂತೆ ಕೋರಿದ್ದರು. ಅದರಂತೆ ಈ ಕಾಲೇಜಿನ ಪರಿಶೀಲನೆಗಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಪತ್ರ ಸಂಖ್ಯೆ ಕಸಂವಿ/ಸ.ಕಾ/2011–12/728, ದಿನಾಂಕ: 30.11.2011ರ ಪತ್ರದಲ್ಲಿ ಈ ಕೆಳಕಂಡ ಸದಸ್ಯರನ್ನೊಳಗೊಂಡ ಉಪಸಮಿತಿಯನ್ನು ನೇಮಿಸಿತ್ತು.

| | |
|---|---|
| ಡಾ. ಟಿ.ಎಸ್. ಸತ್ಯವತಿ | ಅಧ್ಯಕ್ಷರು |
| ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ | ಸದಸ್ಯರು |
| ಡಾ. ಶಿವರಾಜು | ಸದಸ್ಯರು |
| ವಿಶ್ವವಿದ್ಯಾಲಯದ ಅಧಿಕಾರಿ | ಸಂಚಾಲಕರು |

ಮೇಲ್ಕಂಡ ಸಮಿತಿಯು ದಿನಾಂಕ: 19.12.2011ರಂದು ಸ್ಥಳಪರಿಶೀಲನೆ ನಡೆಸಿ ಸವಿವರವಾದ ವರದಿಯನ್ನು ನೀಡಿದೆ. ಆ ವರದಿಯ ಅಂಶಗಳು ಹೀಗಿವೆ: "ಒಂದು ವೇಳೆ ಈ ಕಾಲೇಜನ್ನು ವಿಶ್ವವಿದ್ಯಾಲಯದ ವಹಿಸಿಕೊಂಡಲ್ಲಿ ಸರ್ಕಾರವು ಈಗಾಗಲೇ ಆಯ–ವ್ಯಯದಲ್ಲಿ ಕೊಡುತ್ತಿರುವ 3,10,000/– ರೂ.ಗಳಲ್ಲದೆ, ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಯ ವೇತನಾನುದಾನ ವಾರ್ಷಿಕ ಕನಿಷ್ಠ ರೂ. 32,27,000/– ಗಳನ್ನು ಪಾವತಿಸಬೇಕಾಗುತ್ತದೆ. ಇವುಗಳಲ್ಲದೆ ನೂತನ ಕಟ್ಟಡ, ಸುಸಜ್ಜಿತ ಗ್ರಂಥಾಲಯ, ಪೀಠೋಪಕರಣ, ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಇತ್ಯಾದಿಗಳಿಗೆ ಹೆಚ್ಚುವರಿ ಅಂದಾಜು ಒಂದು ಕೋಟಿ ರೂ.ಗಳ ಅಗತ್ಯವಿರುತ್ತದೆ ಮತ್ತು ಅಪೂರ್ವ ಹಸ್ತಲಿಖಿತ ತಾಳೆಗರಿ ಗ್ರಂಥಗಳನ್ನು ಸೂಕ್ತವಾಗಿ ವಿಷಯವಾರು ಗ್ರಂಥಸೂಚಿಯನ್ನು ತಯಾರಿಸಿ ಸಂರಕ್ಷಣೆಗಾಗಿ ವಿಶೇಷ ಯೋಜನೆಯನ್ನು ಹಮ್ಮಿಕೊಳ್ಳಬೇಕಾಗಿದ್ದು, ಎಲ್ಲಾ ವೆಚ್ಚಗಳು ಸೇರಿದಂತೆ ಒಂದೂವರೆ ಕೋಟಿ ರೂ.ಗಳಷ್ಟು ವೆಚ್ಚವನ್ನು ವಿಶ್ವವಿದ್ಯಾಲಯವು ಭರಿಸುವ ಪ್ರಸಂಗವು ಉದ್ಭವಿಸುತ್ತದೆ. ಸದ್ಯದಲ್ಲಿ ವಿಶ್ವವಿದ್ಯಾಲಯವು ಆಯವ್ಯಯದ ಕೊರತೆಯಲ್ಲಿರುವ ಕಾರಣ ಇದು ವಿಶ್ವವಿದ್ಯಾಲಯಕ್ಕೆ ಅನಗತ್ಯ ಹೊರೆಯಾಗುವುದರಿಂದ ಸರ್ಕಾರವು ಈ ಕೇಂದ್ರವನ್ನು ತನ್ನಲ್ಲಿಯೇ ಉಳಿಸಿಕೊಂಡು ಪೋಷಿಸುವುದು ಯೋಗ್ಯವೆಂದು ಅಭಿಪ್ರಾಯಪಡುತ್ತದೆ." ಈ ಕುರಿತು ಸಮಗ್ರವಾಗಿ ಪರಿಶೀಲಿಸಿ ಮುಂದಿನ ಸೂಕ್ತಕ್ರಮ ಕೈಗೊಳ್ಳಲು ಸಲಹೆ ಪಡೆಯಲು ಮಂಡಿಸಿದೆ.

ನಿರ್ಣಯ: **ಮೇಲುಕೋಟೆ ಸಂಸ್ಕೃತ ಕಾಲೇಜನ್ನು ಘಟಕ ಕಾಲೇಜನ್ನಾಗಿ ತೆಗೆದುಕೊಳ್ಳಬೇಕೆಂಬ ಪ್ರಸ್ತಾವಕ್ಕೆ ಸಂಬಂಧಿಸಿದ ಮುಖ್ಯ ವಿವರಗಳನ್ನು ಪ್ರೊ. ಟಿ.ಎಸ್. ಸತ್ಯವತಿಯವರು ಸಭೆಯ ಮುಂದೆ ಮಂಡಿಸಿದರು. ಸಭೆಯು ಎಲ್ಲ ವಿವರಗಳನ್ನು ಚರ್ಚಿಸಿತು. ಮೇಲುಕೋಟೆ ಸಂಸ್ಕೃತ ಕಾಲೇಜನ್ನು ವಿಶ್ವವಿದ್ಯಾಲಯದ ಘಟಕ ಕಾಲೇಜನ್ನಾಗಿ ತೆಗೆದುಕೊಳ್ಳುವುದು ಸೂಕ್ತವಲ್ಲವೆಂದು ಸಭೆಯು ತೀರ್ಮಾನಿಸಿತು.**

**ವಿಷಯ 7: ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಿಗೆ ಬಾಡಿಗೆ ವಾಹನ ನೀಡುವ ಮತ್ತು ಹೊಸ ವಾಹನವನ್ನು ಖರೀದಿಸುವ ಬಗೆಗೆ.**

ಟಿಪ್ಪಣಿ: ರಾಜ್ಯದಲ್ಲಿರುವ ಅನುದಾನಿತ/ಅನುದಾನರಹಿತ ಪಾಠಶಾಲೆಗಳ ನಿರ್ವಹಣೆಗಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯವನ್ನು ಅಸ್ತಿತ್ವಕ್ಕೆ ತರಲಾಗಿದ್ದು, ನಿರ್ದೇಶನಾಲಯದ ಆಡಳಿತವನ್ನು ಮಾನ್ಯ ನಿರ್ದೇಶಕರು ನೋಡಿಕೊಳ್ಳುತ್ತಿದ್ದಾರೆ. ಇವರು ರಾಜ್ಯಮಟ್ಟದ ಅಧಿಕಾರಿಯಾಗಿದ್ದು, 350ಕ್ಕೂ ಹೆಚ್ಚು ಸಂಸ್ಕೃತ ಪಾಠಶಾಲೆಗಳ ಆಡಳಿತ ಹಾಗೂ ಶೈಕ್ಷಣಿಕ ಕಾರ್ಯಗಳನ್ನು ಪರಿಶೀಲಿಸಲು ರಾಜ್ಯಾದ್ಯಂತ ಸಂಚರಿಸಬೇಕಾಗುವುದು. ಈ ಹಿನ್ನೆಲೆಯಲ್ಲಿ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಿಗಾಗಿ ಸದ್ಯ ತಿಂಗಳಿಗೆ ರೂ. 20,000/–ಗಳಿಗೆ ಮೀರದಂತೆ ಟ್ಯಾಕ್ಸಿಯನ್ನು ಬಳಸಲು ಹಾಗೂ ನೂತನ ಕಾರನ್ನು ಕೊಂಡುಕೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬಹುದಾಗಿದೆ.

ನಿರ್ಣಯ: **ಸಭೆಯು ನಿರ್ದೇಶಕರ ಕಾರ್ಯವ್ಯಾಪ್ತಿಯನ್ನು ಹಾಗೂ ಕೆಲಸದ ಗಂಭೀರತೆಯನ್ನು ಪರಿಶೀಲಿಸಿ ಸದ್ಯ ಸರ್ಕಾರದ ಅಧಿಕಾರಿಗಳಿಗೆ ನೀಡುವಂತೆ ರೂ. 20,000/– ಗಳಿಗೆ ಮೀರದಂತೆ ಟ್ಯಾಕ್ಸಿಯನ್ನು ಬಳಸಬಹುದೆಂದೂ ಹೊಸ ಕಾರೊಂದನ್ನು ಕೊಳ್ಳಲು ಸರ್ಕಾರಕ್ಕೆ ಸೂಕ್ತ ಪ್ರಸ್ತಾವನೆ ಕಳುಹಿಸಬಹುದೆಂದೂ ತೀರ್ಮಾನಿಸಿತು.**

**ವಿಷಯ 8: ನ್ಯಾಯಾಲಯದಲ್ಲಿರುವ ವಿವಿಧ ಕೇಸುಗಳ ಬಗೆಗೆ.**

ಟಿಪ್ಪಣಿ: ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಸಂಸ್ಕೃತ ಪಾಠಶಾಲೆಗಳು ಮತ್ತು ಕಾಲೇಜುಗಳನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸುವ ಪೂರ್ವದಲ್ಲಿ ಮತ್ತು ವರ್ಗಾಯಿಸಿದ ನಂತರದಲ್ಲಿ ಇವೆಲ್ಲವುಗಳಿಗೆ ಸಂಬಂಧಿಸಿದಂತೆ ರಾಜ್ಯದ ಕೆಲವು ನ್ಯಾಯಾಲಯಗಳಲ್ಲಿ ಹೂಡಲಾಗಿರುವ ವಿವಿಧ ಕೇಸುಗಳು ತೀರ್ಮಾನವಾಗಬೇಕಾಗಿದೆ. ಆ ದಾವೆಗಳಿಗೆ ಸಂಬಂಧಿಸಿದಂತೆ ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರು ವಿವರಗಳನ್ನು ನೀಡಿದ್ದಾರೆ. ಆದಿನ ಕಾನೂನು ಸಲಹೆಗಾರರನ್ನು ಕರೆಸಿ ಚರ್ಚಿಸಲು ವಿಷಯವನ್ನು ಮಂಡಿಸಲಾಗಿದೆ.

ನಿರ್ಣಯ: **ಸಭೆಯು ಕಾನೂನು ಸಲಹೆಗಾರರು ನೀಡಿದ ವಿವರಗಳನ್ನು ಪರಿಶೀಲಿಸಿತು. ಅನಂತರ ಕೋರ್ಟಿನಿಂದಾಗಲೀ ಸಂಬಂಧಿಸಿದ ಪ್ರತಿವಾದಿಗಳಿಂದಾಗಲೀ ವಿಶ್ವವಿದ್ಯಾಲಯಕ್ಕೆ ಆಯಾ ಪ್ರಕರಣಗಳಿಗೆ ಸಂಬಂಧಿಸಿದ ಸೂಕ್ತ ಪತ್ರಗಳು ಬಂದ ನಂತರ ಕೇಸುಗಳ ಬಗೆಗೆ ಕ್ರಮ ವಹಿಸಬಹುದೆಂದು ಸೂಚಿಸಿತು.**

**ವಿಷಯ 9: ವಿದ್ವಾನ್ ಕೆ. ಗಂಗಣ್ಣ –ಇವರನ್ನು ಕ್ರೋಢೀಕೃತ ವೇತನದ ಆಧಾರದ ಮೇಲೆ ತಾತ್ಕಾಲಿಕ ನೇಮಕಾತಿ ಮಾಡಿಕೊಳ್ಳುವ ಬಗೆಗೆ.**

ಟಿಪ್ಪಣಿ: ವಿದ್ವಾನ್ ಕೆ. ಗಂಗಣ್ಣನವರು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸಂಸ್ಕೃತ ವಿಷಯ ಪರಿವೀಕ್ಷಕರಾಗಿ ಮತ್ತು ಪ್ರೌಢಶಿಕ್ಷಣ ಪರೀಕ್ಷಾ ಮಂಡಲಿಯಲ್ಲಿ ಹೆಚ್ಚುವರಿಯಾಗಿ ನಿಯೋಜನೆಯ ಮೇರೆಗೆ ಸಹಾಯಕ ನಿರ್ದೇಶಕರಾಗಿ ೧೦ ವರ್ಷಗಳ ಕಾಲ ಸಂಸ್ಕೃತ ಮತ್ತು ಇತರ ಭಾಷೆಗಳ ಪರೀಕ್ಷೆಗಳ ಕಾರ್ಯಭಾರಗಳನ್ನು ನಿರ್ವಹಿಸಿದ್ದಾರೆ. ಜನವರಿ ೨೦೧೧ರಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪೂರ್ಣಪ್ರಮಾಣದಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಥಮಾದಿಂದ ಆರಂಭಿಸಿ ವಿದ್ವದುತ್ತಮಾ ಪರೀಕ್ಷೆಗಳ ನಿರ್ವಹಣೆಯ ಮೇಲುಸ್ತುವಾರಿಯನ್ನು ಸಮರ್ಥವಾಗಿ ನಿರ್ವಹಿಸಿರುತ್ತಾರೆ. ಇವರು ಕಳೆದ ೨೦೧೧ರ ಸೆಪ್ಟೆಂಬರ್ ೩೦ರಂದು ನಿವೃತ್ತರಾಗಿರುತ್ತಾರೆ. ಪ್ರಸ್ತುತ ೨೦೧೧–೧೨ನೇ ಸಾಲಿನ –ನಿರ್ದೇಶನಾಲಯ ಹಾಗೂ ವಿಶ್ವವಿದ್ಯಾಲಯದ– ಪ್ರಸಿದ್ಧ ಪರೀಕ್ಷೆಗಳನ್ನು ನಡೆಸಬೇಕಾಗಿರುವುದರಿಂದ ಇಂಥ ಅನುಭವಿ ತಜ್ಞರ ಅವಶ್ಯಕತೆಯಿರುತ್ತದೆ. ಆದುದರಿಂದ ಇವರ ನಿವೃತ್ತಿ ವೇತನ ನಿರ್ಧಾರಿತವಾದ ನಂತರ ನಿಗದಿತ ಮಾಸಿಕ ಸಂಭಾವನೆಯನ್ನು ನೀತಿ–ನಿಯಮಗಳ ಆಧಾರದಲ್ಲಿ ನಿರ್ಧರಿಸಿ ಕ್ರೋಢೀಕೃತ ವೇತನದ ಆಧಾರದ ಮೇಲೆ ವಿದ್ವಾನ್ ಕೆ. ಗಂಗಣ್ಣ ಅವರನ್ನು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದ ಸಂಯೋಜಕರನ್ನಾಗಿ ನೇಮಿಸಿಕೊಳ್ಳಲು ಅನುಮೋದನೆಗಾಗಿ ವಿಷಯ ಮಂಡಿಸಿದೆ.

ನಿರ್ಣಯ: **ಸಹಾಯಕ ನಿರ್ದೇಶಕರಾಗಿ ಕೆಲಸ ನಿರ್ವಹಿಸಿ ನಿವೃತ್ತಿಗೊಂಡಿರುವ ವಿದ್ವಾನ್ ಕೆ. ಗಂಗಣ್ಣ ಅವರ ಸೇವೆಯ ಅಗತ್ಯ ವಿಶ್ವವಿದ್ಯಾಲಯಕ್ಕೆ ಇರುವುದನ್ನು ಮಾನ್ಯ ಕುಲಪತಿಗಳು ಸಭೆಗೆ ಮನವರಿಕೆ ಮಾಡಿಕೊಟ್ಟರು. ಅವರು ನಿವೃತ್ತಿ ಹೊಂದುವ ಮುನ್ನ ರೂ. 21,405/–ಗಳನ್ನು ಪಡೆಯುತ್ತಿದ್ದು, ನಿವೃತ್ತಿ ವೇತನ ರೂ. 7,580/– ನಿಗದಿಗೊಂಡಿರುವುದರಿಂದ ರೂ. 12,000/–ಕ್ಕೆ ಮೀರದಂತೆ ಕ್ರೋಢೀಕೃತ ವೇತನವನ್ನು 2011 ನವೆಂಬರ್ 1ರಿಂದ ನೀಡಬಹುದೆಂದು ಸಭೆಯು ತೀರ್ಮಾನಿಸಿತು.**

**ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರ ವಿಷಯಗಳು:**

**ವಿಷಯ 1: ದಿನಾಂಕ: 07.01.2012ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಎರಡನೇ ಸಭೆಯ ನಡಾವಳಿ.**

ಟಿಪ್ಪಣಿ: ದಿನಾಂಕ: 07.01.2012ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಎರಡನೇ ಸಭೆಯ ನಡಾವಳಿಯನ್ನು ಇರಿಸಲಾಗಿದೆ. ವಿಷಯ ಸಂಖ್ಯೆ 1ರಿಂದ 7ರವರೆಗೆ ಚರ್ಚೆಯಾಗಿ ತೀರ್ಮಾನವನ್ನು ಪಡೆದು ಅಧ್ಯಕ್ಷರ ಅಪ್ಪಣೆ ಮೇರೆಗೆ 1ರಿಂದ 6 ವಿಷಯಗಳ ಕುರಿತು ತೀರ್ಮಾನಿಸಲಾಗಿದೆ.

ನಿರ್ಣಯ: **07.01.2012ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಸಭೆಯ ವಿಷಯ 6ಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ./ಎಂ.ಫಿಲ್. ಪದವಿಯನ್ನು 2012–13ನೇ ಸಾಲಿನಿಂದ ಪ್ರಾರಂಭಿಸಬಹುದೆಂದು ಸಭೆಯು ಸೂಚಿಸಿತು. ಈ ಸಂಬಂಧವಾಗಿ ಈಗಾಗಲೇ ಸಿದ್ಧಗೊಂಡಿರುವ ಪಿಎಚ್.ಡಿ./ಎಂ.ಫಿಲ್. ಪದವಿ ನಿಯಮಾವಳಿಯನ್ನು ಸಮಗ್ರವಾಗಿ ಪರಿಶೀಲಿಸಲು ಸಮಿತಿಯೊಂದನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ರಚಿಸಿತು.**

| | |
|---|---|
| ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ಡಾ. ಟಿ.ಎಸ್. ಸತ್ಯವತಿ | ಸದಸ್ಯರು |
| ಪಂ. ಜಯತೀರ್ಥಾಚಾರ್ಯ ಮಳಗಿ | ಸದಸ್ಯರು |
| ಡಾ. ಪಿ.ಬಿ. ಸಂತಪ್ಪನವರ | ಸದಸ್ಯರು |
| ಡಾ. ಶ್ರೀರಾಮ ಭಟ್ಟ | ಸದಸ್ಯರು |
| ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**07.01.2012ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ಸಭೆಯ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರ ವಿಷಯಗಳಲ್ಲಿ ಸಂಶೋಧನ ಕೇಂದ್ರಗಳ ಮಾನ್ಯತಾ ಪರಿಶೀಲನೆಗಾಗಿ 'ಸಂಶೋಧನ ಕೇಂದ್ರ ಮಾನ್ಯತಾ ಪರಿಶೀಲನ ಉಪ ಸಮಿತಿ'ಯೊಂದನ್ನು ರಚಿಸಬಹುದೆಂಬ ವಿವರಗಳನ್ನು ಪರಿಶೀಲಿಸಿದ ಸಭೆಯು ಈ ಕೆಳಕಂಡ ತಜ್ಞರನ್ನೊಳಗೊಂಡ ಉಪಸಮಿತಿಯೊಂದನ್ನು ರಚಿಸಿತು.**

| | |
|---|---|
| ಶ್ರೀ ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು | ಅಧ್ಯಕ್ಷರು |
| ಡಾ. ಎಂ. ಶಿವಕುಮಾರಸ್ವಾಮಿ | ಸದಸ್ಯರು |
| ಡಾ. ಎ.ವಿ. ನಾಗಸಂಪಿಗೆ | ಸದಸ್ಯರು |

| | |
|---|---|
| ಶ್ರೀ ಜಿ. ಹನುಮಂತರಾಯಪ್ಪ | ಸದಸ್ಯರು |
| ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ | ಸದಸ್ಯರು |
| ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ವಿಷಯ 2: ದಿನಾಂಕ: 13.01.2012ರಂದು ನಡೆದ ಹಣಕಾಸು ಸಮಿತಿ ಸಭೆಯ ನಡಾವಳಿ.**

ಟಿಪ್ಪಣಿ: ದಿನಾಂಕ: 13.01.2012ರಂದು ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಮೂರು ವಿಷಯಗಳ ಕುರಿತು ಚರ್ಚೆಯಾಗಿ, ಪಡೆದ ತೀರ್ಮಾನಗಳ ನಡಾವಳಿಯನ್ನು ಇರಿಸಲಾಗಿದೆ.

ನಿರ್ಣಯ: **ಸಭೆಯು ಆಮೂಲಾಗ್ರವಾಗಿ ಪರಿಶೀಲಿಸಿ ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 3: ಸಂಸ್ಕೃತ ಕಾಲೇಜುಗಳ ಹಾಗೂ ಸಂಸ್ಕೃತ ಪಾಠಶಾಲೆಗಳ ಪರೀಕ್ಷಾ ಸಂಬಂಧಿ ಕಾರ್ಯಚಟುವಟಿಕೆಗಳನ್ನು ನೋಡಿಕೊಳ್ಳಲು ಘಟಕ ಕಾಲೇಜುಗಳಲ್ಲಿರುವ ಅಧ್ಯಾಪಕರನ್ನು ಹೆಚ್ಚುವರಿ ಕಾರ್ಯಭಾರದೊಂದಿಗೆ ಪ್ರತಿನಿಯೋಜನೆಯ ಮೇಲೆ ತೆಗೆದುಕೊಳ್ಳುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಡಿಯಲ್ಲಿ ಪ್ರಸ್ತುತ ಘಟಕ ಕಾಲೇಜುಗಳು, ಅನುದಾನಿತ ಕಾಲೇಜುಗಳು ಮತ್ತು ಅನುದಾನರಹಿತ ಕಾಲೇಜುಗಳು ಸೇರಿದಂತೆ ಒಟ್ಟಾರೆ 21 ಕಾಲೇಜುಗಳು ಹಾಗೂ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಅಧೀನದಲ್ಲಿ 350ಕ್ಕೂ ಹೆಚ್ಚು ಅನುದಾನಿತ ಮತ್ತು ಅನುದಾನರಹಿತ ಪಾಠಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ಇವುಗಳ ಪರೀಕ್ಷಾ ಸಂಬಂಧಿ ಕಾರ್ಯಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳಲು ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಲ್ಲಿನ ಅಧ್ಯಾಪಕರನ್ನು ಹೆಚ್ಚುವರಿ ಕಾರ್ಯಭಾರದೊಂದಿಗೆ ಪ್ರತಿನಿಯೋಜನೆಯ ಮೇರೆಗೆ ತೆಗೆದುಕೊಳ್ಳಬೇಕಾಗಿದ್ದು, ಅಧ್ಯಾಪಕರುಗಳ ಜ್ಯೇಷ್ಠತಾಪಟ್ಟಿಯಂತೆ ಮತ್ತು ಕಾರ್ಯಶೈಲಿ ಹಾಗೂ ಗುಣಮಟ್ಟದ ದೃಷ್ಟಿಯಲ್ಲಿ ಈ ಕೆಳಕಂಡವರನ್ನು ಪರಿಗಣಿಸಬಹುದಾಗಿದೆ.

ವಿಶ್ವವಿದ್ಯಾಲಯದ ಘಟಕ ಕಾಲೇಜುಗಳಾದ ಮೈಸೂರಿನ ಹಾಗೂ ಬೆಂಗಳೂರಿನ ಸಂಸ್ಕೃತ ಕಾಲೇಜುಗಳಲ್ಲಿ ಇರುವ ಅಧ್ಯಾಪಕರುಗಳಲ್ಲಿ ಹೆಚ್ಚುವರಿ ಕಾರ್ಯಭಾರದೊಂದಿಗೆ ಕರ್ತವ್ಯನಿರ್ವಹಿಸಬೇಕಾದ ಕಾರಣ ಬೆಂಗಳೂರು ಕಾಲೇಜಿನ ಅಧ್ಯಾಪಕರುಗಳನ್ನು ಪರಿಗಣಿಸಬಹುದಾಗಿದ್ದು, ಅವರುಗಳಲ್ಲಿ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಅನುಭವ ಹೊಂದಿರುವವರಲ್ಲಿ **ವಿದ್ವಾನ್ ಡಾ. ಎಸ್.ಎನ್. ಸಂಪತ್ಕುಮಾರ್** ಇವರನ್ನು ಪರಿಗಣಿಸಬಹುದಾಗಿದ್ದು, ಇವರು ವಿದ್ವತ್ ಪದವಿಯೊಂದಿಗೆ ಎಂ.ಎ. ಬಿ.ಇಡಿ ಪದವಿಯನ್ನು ಹೊಂದಿದ್ದು, ಇತ್ತೀಚೆಗೆ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ತಿರುಪತಿ ವಿದ್ಯಾಪೀಠದಿಂದ ವಿದ್ಯಾವಾರಿಧಿ ಪದವಿಯನ್ನು ಹೊಂದಿರುತ್ತಾರೆ. ಇವರು **25ಕ್ಕೂ ಹೆಚ್ಚು ವರ್ಷಗಳ ಬೋಧನಾನುಭವದೊಂದಿಗೆ** ಎರಡು ವರ್ಷಗಳಿಗೂ ಹೆಚ್ಚು ಕಾಲ **ಪ್ರಭಾರಿ ಪ್ರಾಚಾರ್ಯರು,** ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸಿ, ಇದೀಗ ವಿಶಿಷ್ಟಾದ್ವೈತ ವೇದಾಂತ ವಿಭಾಗಾಧ್ಯಕ್ಷರಾಗಿರುತ್ತಾರೆ. ಇವರನ್ನು ಇದೀಗ ನಿರ್ವಹಿಸುತ್ತಿರುವ ಕಾರ್ಯಭಾರದೊಂದಿಗೆ ಹೆಚ್ಚುವರಿಯಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗ ವಿಭಾಗದ ಸಹಾಯಕ ಕುಲಸಚಿವರಾಗಿ ನೇಮಿಸಿಕೊಳ್ಳಬೇಕಾಗಿರುತ್ತದೆ.

ನಿರ್ಣಯ: **ಬೆಂಗಳೂರಿನ ಘಟಕ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ವಿದ್ವಾನ್ ಡಾ. ಎಸ್.ಎನ್. ಸಂಪತ್ಕುಮಾರ್ ಅವರನ್ನು ಇದೀಗ ನಿರ್ವಹಿಸುತ್ತಿರುವ ಕಾರ್ಯಭಾರದೊಂದಿಗೆ ಹೆಚ್ಚುವರಿಯಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗ ವಿಭಾಗದ ಸಹಾಯಕ ಕುಲಸಚಿವರಾಗಿ ಕಾರ್ಯನಿರ್ವಹಿಸಲು ಸಭೆಯು ತನ್ನ ಅನುಮೋದನೆಯನ್ನು ನೀಡಿತು.**

**ವಿಷಯ 4: 'ಸಂಸ್ಕೃತ ಪುಸ್ತಕ ಪುರಸ್ಕಾರ ಯೋಜನೆ' ಕುರಿತು**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಸಂಸ್ಕೃತ ಭಾಷೆ, ಸಾಹಿತ್ಯ, ಸಂಸ್ಕೃತಿ, ಶಾಸ್ತ್ರ ಹಾಗೂ ವಿಜ್ಞಾನ ಮತ್ತಿತರೆ ಸಂಸ್ಕೃತ ಸಂಬಂಧೀ ವಿಚಾರಗಳ ಪಾಲನೆ ಹಾಗೂ ಪೋಷಣೆಗಾಗಿ ಅಸ್ತಿತ್ವಕ್ಕೆ ಬಂದ ಕಾರಣ, ಸಂಸ್ಕೃತ ಸಾಹಿತ್ಯದ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಗುರುತಿಸಿ ಪುರಸ್ಕರಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ದಿನಾಂಕ: 20.01.2012ರಂದು ಪೂರ್ವಾಹ್ನ 'ಸಂಸ್ಕೃತ ಪುಸ್ತಕ ಪುರಸ್ಕಾರ ಯೋಜನೆ ಸಮಿತಿ' ಸಭೆ ನಡೆಯಿತು.

ನಿರ್ಣಯ: **ಪ್ರಶಿಕ್ಷಣ ಪರಿಷತ್ತಿನ ಮೊದಲನೇ ಸಭೆಯ ವಿಷಯ ಸಂಖ್ಯೆ 9ರಲ್ಲಿ ತೀರ್ಮಾನಿಸಿದಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಡಾ. ಎಚ್.ಆರ್. ವಿಶ್ವಾಸ್, ಡಾ. ಎ. ಹರಿದಾಸ ಭಟ್ಟ ಮತ್ತು ಡಾ. ಜನಾರ್ದನ ಹೆಗಡೆ –ಇವರು 'ಪುಸ್ತಕ ಪುರಸ್ಕಾರ'ಕ್ಕೆ ಬಂದ ಪುಸ್ತಕಗಳನ್ನು ಪರಿಶೀಲಿಸಿದರು. ಆದರೆ ಪರಿಶೀಲನಾ ಕಾರ್ಯ ಮುಗಿಯದೇ ಇದ್ದುದರಿಂದ ದಿನಾಂಕ: 28.01.2012ರ ಶನಿವಾರ ಬೆಳಿಗ್ಗೆ 11.00ಕ್ಕೆ ಸಭೆ ಸೇರಲು ತೀರ್ಮಾನಿಸಿರುವುದನ್ನು ಮಾನ್ಯ ಕುಲಪತಿಗಳು ಸಭೆಯ ಗಮನಕ್ಕೆ ತಂದರು. ಈ ವಿಷಯಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮವಹಿಸಲು ಮಾನ್ಯ ಕುಲಪತಿಗಳಿಗೆ ಸಭೆಯು ಕೋರಿತು.**

ವಂದನಾರ್ಪಣೆಗಳೊಂದಿಗೆ ಸಭೆ ಮುಕ್ತಾಯಗೊಂಡಿತು.

| | |
|---|---|
| **ಡಾ. ಶ್ರೀನಿವಾಸ ವರಖೇಡಿ** | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ** |
| ಸದಸ್ಯ ಕಾರ್ಯದರ್ಶಿ | ಅಧ್ಯಕ್ಷರು |